ಬೆಂಗಳೂರು ಡಿಸ್ಟ್ರಿಕ್ಟು.

ತಾರೀಖು 29ನೇ ಆಗಸ್ಟು 1884.

ಚಿಕ್ಕಬಳ್ಳಾಪುರದ ವೈಶ್ಯರ ವೆಂಕಟನಾರಣಯ್ಯ ನೆಂಬವನು ಬೆಂಗಳೂರು ಕೋಮಟಿ ಪೇಟೆ ಚಿಂತಾಮಣಿ ಭಾಸ್ಕರಯ್ಯನ ಜೊತೇಲ್ ಮಹಡೀಮೇಲೆ ಯಿಟ್ಟಿದ್ದ ಈ ಕೆಳಗೆ ನಮೂದಿಸಿರುವ ಮಾಲುಗಳು ಸದರೀ ಭಾಸ್ಕರಯ್ಯನ ಮಗ ಆದ್ಯಪ್ಪನು 24—8—84ರಲ್ಲು ಕಳವು ಮಾಡಿರುವಂತೆ ತಿಳಿಯುತ್ತೇಯಾಗಿ ಸದರೀ ಮಾಲು ಪತ್ತೇಮಾಡಿ ಕೊಟ್ಟವರಿಗೆ ಮೇಲ್ಕಂಡ ವೆಂಕಟನಾರಣಯ್ಯನು 50 ರೂಪಾಯಿ ಇನಾಂ ಕೊಡುವದಾಗಿ ಇದರಿಂದ ಫಾಯಿಷ್ ಮಾಡಿರುತ್ತಾನೆ :—

	ರೂ.	ಆ.	ಪೈ.
ನಗದು ಮೊಬಲಗು	175	0	0
ಕೆಂಪು ಹಾಕಿದ ಸಣ್ಣವಾಲೆ ಜೊತೆ 3ಕ್ಕೆ	10	0	0
ಜಂದ್ರಮುರು ಜೊತೆ 1 ಹೊಸದು 34 ಕೆಂಪು ಯಿತ್ತು	45	0	0
ಹಳೇದು ಬೆಂಡುವಾಲೆ ಕೆಂಪುಹಾಕಿದ್ದು 1ಜೊತೆ	10	0	0
ಸಣ್ಣ ಕೆಂಪುಗಳು ಸುಮಾರು 60	5	0	0
ಕೆಂಪುಗಳು ಕೆತ್ತಿದ ಭಂಗಾರದ ಬಿಲ್ಲೆ	5	0	0
ಕುಂದಣ ಬಣ್ಣದ ತಗಡು 2 ವರಹಾತೂಕ	12	0	0
ಭಂಗಾರದ ಮಚ್ಚುಗಳು	8	0	0
ಹವಳಗಳು	5	0	0
ತಾಸು 1, ವರೆಗಲ್ಲು 1, ಮೈಣದ ಅಂಡೆ 1	5	0	0
ಭಂಗಾರದ ತರಪುಕಲ್ಲಿನ ಹತ್ತು ಕಡಕು ಜೊತೆ 1	6	0	0
ರೈಲ್ ಚೀಲ 1, ಬೀಗ 1	0	8	0
ಅನೆಪೊಪ್ಪಳಿ ಚೀರೆ ಹೊಸದು 1	25	0	0
ಜುಮ್ಲಾ	311	8	0

ಕೃಷ್ಣಯ್ಯಂಗಾರ್, ಫಾರ್ ಡಿಪ್ಯೂಟಿ ಕಮ್ಮಿಷನರ್.

ಬೆಂಗಳೂರು ಸಬ್‌ಜಡ್ಜ್‌ರಯವರ ಕೋರ್ಟಿನಲ್ಲಿ.

1884ನೇ ಇಸವಿ ಅರ್ಜೀ ನಂಬರ್ 162.

ಮೃತಪಟ್ಟ ವೆಂಗ್ಯಾಣದ ತಿಮ್ಮಯ್ಯನ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಚಿಕ್ಕಬಳ್ಳಾಪುರದ ಕೊತ್ವಾಲ್ ಗೋಪಾಲಯ್ಯನ ಮಗ ವಾಬಂಣನು, ಮೃತಪಟ್ಟ ಸದರೀ ತಿಮ್ಮಯ್ಯನಿಗೆ ತವ್ಕಡಸಿನ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ, ಚಿಕ್ಕಬಳ್ಳಾಪುರದ ಸ್ಥಳದ ವಾಬಂಣನು ಚಿಕ್ಕಬಳ್ಳಾಪುರದ ವಾಸಸ್ಥರಾಗಿ ಮೃತಪಟ್ಟ ತಿಮ್ಮಯ್ಯನ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ವಾಬಂಣನ ಅರ್ಜೀಯನ್ನು 1884ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆಕಾಲದಲ್ಲಿ ಸದರೀ ಮೃತಪಟ್ಟ ತಿಮ್ಮಯ್ಯನ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಅರ್ಜೀ ನಂಬರ್ 163.

ಮೃತಪಟ್ಟ ಸುಬ್ಬರಾಯಪ್ಪನವರ ಆಸ್ತಿ ವಿಷಯದಲ್ಲಿ—

ಅರ್ಜೀದಾರು) ಕೋಲಾರ್ ಡಿಸ್ಟ್ರಿಕ್ಟು ಬವರಿಂಗ್‌ಪೇಟೆ ತಾಲ್ಲೂಕು ವುರಗದ ವೆಂಕಟರಮಣಯ್ಯ, ಮೃತಪಟ್ಟ ಸದರೀ ಸುಬ್ಬರಾಯಪ್ಪನವರಿಗೆ ದತ್ತುಮಗ ನಾಗಬೇಕೆಂಬ ಹಕ್ಕುದಾರೀ ಮೇಲೆ ವುರಗದ ಸ್ಥಳದ ವೆಂಕಟರಮಣಯ್ಯನು ವುರಗದೆ ವಾಸಸ್ಥರಾಗಿ ಮೃತಪಟ್ಟ ಸುಬ್ಬರಾಯಪ್ಪನವರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವೀ 27ನೇ ಆಕ್ಟು ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿ ಇರುತ್ತಾರೆ.

ಸದರೀ ದರಖಾಸ್ತುದಾರರಾದ ವೆಂಕಟರಮಣಯ್ಯನವರ ಅರ್ಜಿಯನ್ನು 1884ನೇ ಇಸವಿ ಸಪ್ಟಂಬರ್ ತಿಂಗಳು ತಾರೀಖು 18ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1884ನೇ ಇಸವಿ ಆಗಸ್ಟು ತಿಂಗಳು 27ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನನ್ನ ಸಹಿ ಹಸ್ತಖತ್ತೊಹನೆ ಕೊಡೋಣಾಗಿದೆ.

ಸಿ. ಕ್ರಿಸ್ಟ್,
ಸಬ್ ಜಡ್ಜ್.